ಗೆಳೆಯರು, ಸೈಕಲ್ ಮೇಲಿಂದ ಹಿಡಿದು ಕಾರಿನಲ್ಲಿ ಹೋಗುವ ಹರೆಯದ ಹುಡುಗರಾದಿಯಾಗಿ ಎಲ್ಲರೂ ಅವಳ ಕೆಂಪು ಮೂತಿಗೆ ತುಟಿ ಇಟ್ಟು ಬಿಟ್ಟೆವು ಎಂಬಂತೆ ಮೂತಿ ಆಡಿಸಿ, ತಮ್ಮ ತುಟಿಗಳು ಕತ್ತರಿ ನಡುವೆ ಇಟ್ಟ ಅಡಕೆಗಳ ಕತ್ತರಿಸುವಂತೆ ಒಮ್ಮೆ ಹಲ್ಲುಗಳ ನಡುವೆ ಕಚ್ಚಿ ಅವಳ ಎದುರು ಅವನ್ನು ತೆರೆದು ಆ ನಗುವಿನಲ್ಲೇ ನೀನು ನನ್ನ ಸಂಗಾತಿ ಎಂಬಂತೆ ತೋರ್ಪಡಿಸಿಕೊಂಡು ಹೋಗುವುದೆಲ್ಲ ಇವನಿಗೆ ತಲೆಚಿಟ್ಟು ಹಿಡಿಸಿತ್ತು. ಆ ವೇಳೆಯಲ್ಲಿ ಆಕೆ ದಿಗ್ವಿಜಯ ಶಾಲಿನಿಯಂತೆ ಎದೆ ಸೆಟೆಸಿ ನಡೆಯುವಾಗ ಮಂಕಾಗಿ ಬಿಡುತ್ತಿದ್ದ. ಫುಟ್‌ಪಾತ್ ಮೇಲೆ ಸಿಟಿಯಲ್ಲಿ ಹೋಗುವಾಗಲೂ ಯಾರೋ ಸಿಕ್ಕಿದಾಗ ಇವರು ತನ್ನ ಗೆಳೆಯರು ಎಂದು ಪರಿಚಯಿಸಿ, ಆತನ ಜೊತೆ ಆ ಜನರ ಸುತ್ತಾಟಗಳ ಗದ್ದಲದಲ್ಲೂ ಮಾತಿಗೆ ನಿಂತು, ಅಸಾಧ್ಯವಾದ ತಾಳ್ಮೆ ಪರೀಕ್ಷೆಗೆ ಇವನನ್ನು ಒಡ್ಡುತ್ತಿದ್ದಳು. 'ಸಿಕ್ಕ ಸಿಕ್ಕಿದವರ ಜೊತೆಯಲ್ಲೂ ಸಮಯ ಪ್ರಜ್ಞೆಯನ್ನೇ ಮರೆತು ಮಾತಿಗೆ ನಿಲ್ಲೊದ್ರಿಂದ ನಿನಗೆ ಯಾರಾದ್ರೂ ನೊಬೆಲ್ ಪ್ರೈಸ್ ಕೊಡ್ತಾರಾ ಅಥವಾ ಸಾವಿರಾರು ಹುಡುಗರ ಜೊತೆಯಲ್ಲೆಲ್ಲಾ ಮಾತನಾಡಿದ್ದೇನೆ ಎಂದು ಏನಾದರೂ ಗಿನ್ನಿಸ್ ದಾಖಲೆಗೆ ಪ್ರಯತ್ನಿಸ್ತಿದ್ದಿಯಾ?' ಎಂದು ಆಗ ವಾರಿಜಾಳಿಗೆ ಗೇಲಿ ಮಾಡಿದ್ದಾಗ ಆಕೆ ಮುನಿಸಿಕೊಂಡು ಆಟೋ ಹತ್ತಿ ಕ್ಯಾರೇ ಎನ್ನದೆ ಹೊರಟೇ ಹೋಗಿದ್ದಳು. ಮರುದಿನ ಇವನೇ ಅವಳ ಬಳಿ ಹೋಗಿ 'ತಪ್ಪಾಯ್ತು ಕಣೆ, ನಾನು ತಮಾಷೆಯಲ್ಲಿ ಏನೇನೋ ಹೇಳಿರ್ತಿನಿ, ಅದನ್ನೆಲ್ಲ ಸಿರೀಯಸ್ ಆಗಿ ತಗೋಬೇಡ' ಎಂದಿದ್ದರೂ 'ನನಗೆ ಗೊತ್ತು ಗಂಡಸರು ಹೇಗಿರ್ತಾರೆ ಅಂತ ತಿಳಕೊಂಡಿದ್ದೀನಿ. ನೀವೆಲ್ಲ ಹುಡುಗರು ಫ್ರೀಯಾಗಿ ಚೆಲ್ಲು ಚೆಲ್ಲಾಗಿ ಇರಲು ಎಲ್ಲರ ಜೊತೆಯೂ ಕೂಡಲು ಬಯಸ್ತೀರಿ. ಆದ್ರೆ ಆಕೆ ತನ್ನಿಚ್ಛೆಯಂತೆ ತನ್ನ ಸ್ವಾಭಿಮಾನ ಹಾಗೂ ಇಷ್ಟಗಳಿಗೆ ತಕ್ಕಂತೆ ಇರಲು ಬಿಡುವುದಿಲ್ಲ' ಎಂದು ತನ್ನ ಸಿಟ್ಟನ್ನು ತೋರಿಸಿಕೊಂಡು, ಒಂದೇ ಉಸುರಿಗೆ ಹೇಳಿ, ಇನ್ನು ಒಂದು ವಾರದವರೆಗೆ ನನ್ನ ಬಳಿ ಸುಳಿಯಬೇಡಿ ಎಂದು ಹೇಳಿ ಅವನನ್ನು ಹಿಂತಿರುಗಿಸಿದ್ದಳು.

ಈಗ ರಾಜಿಯ ಎದಿರು ವಾರಿಜಾಳ ಮಾತು ಮೌನದಲ್ಲೇ ಹಲವಾರು ಕಥೆ ಮತ್ತು ದೃಶ್ಯಗಳಾಗಿ ಚಂಡೆಮದ್ದಳೆಗೆ ಕುಣಿವ ಹಾಗೆ ಕುಣಿಯತೊಡಗಿದ್ದವು. 'ನಾನು ಪಿ.ಯು, ಓದೋವಾಗ ನನ್ನನ್ನು ತುಂಬ ಲವ್ ಮಾಡಿದ್ದ ಹುಡುಗನ ಕಳಚಿಬಿದ್ದಿದ್ದ ಗುಂಡಿಗಳೆರಡನ್ನು ಎತ್ತಿಟ್ಟುಕೊಂಡಿದ್ದೆ. ಎಷ್ಟೋ ದಿನಗಳವರೆಗೆ ಪೌಡರ್ ಡಬ್ಬಿಯೊಳಗೆ ಆ ಗುಂಡಿಗಳನ್ನು ಇಟ್ಟುಕೊಂಡಿದ್ದೆ. ಹ್ಯಾಗೋ ನನ್ನ ಅಕ್ಕ ಆ ಗುಂಡಿಗಳನ್ನು ಬೀಳಿಸಿ ಕೈಗೆ ಸಿಗದಂತೆ ಮಾಡಿದ್ದಳು. ಪಾಪ ಆ ಹುಡುಗ ಅದೇನಾಯ್ತೋ ಕಾಣೆ. ಮತ್ತೆ ನನ್ನ ಕೈಗೆ ಸಿಗಲೇ ಇಲ್ಲ. ನನ್ನೊಳಗೆ ಪ್ರೀತಿ ಮೂಡೋ ಹೊತ್ತಿಗೆ ಅವನೇ ನಾಪತ್ತೆಯಾಗಿಬಿಟ್ಟಿದ್ದ' ಎಂದು ರಾಜಿ ತನ್ನ ಹಳೆಯ ನೆನಪನ್ನೋ ಪ್ರೇಮವನ್ನೋ ಇಲ್ಲವೇ ದಕ್ಕದ ಪ್ರೀತಿಯನ್ನೋ ಇವನೊಡನೆ ಸುಮ್ಮನೆ ಹೇಳಿಕೊಂಡಳು. ವಾರಿಜಾಳ ಬಳಿಯ ಬಗ್ಗೆ ತಾನೂ ಹೇಳಬೇಕೆನಿಸಿದರೂ ತಮಗೆ ಈ ಹಿಂದೆ ಯಾರ ಸಹವಾಸವೂ ಇರಲಿಲ್ಲ ಎಂದು ಪ್ರಮಾಣ ಮಾಡಿಬಿಟ್ಟಿದ್ದ. ಛೇ ತನ್ನೊಳಗೆ ಉಳಿವ ಸಣ್ಣತನಗಳನ್ನೆಲ್ಲ ಕೊಲ್ಲುವ ಬಗೆಯಾದರೂ ಹೇಗೆ? ವಾರಿಜಾಳ ನಿರ್ಭಿಡೆ, ಎಗ್ಗಿಲ್ಲದ ನಾಚಿಕೆಯಿಲ್ಲದ ಅವಳ ವರ್ತನೆ, ಹುಡುಗರ ಜೊತೆ ಹರಟುವುದೆಂದರೆ ಜಗತ್ತಿನ ಅತ್ಯಂತ ಸುಂದರ ಕ್ಷಣಗಳು ಎಂದು ನಂಬುವ ರೀತಿ. ಇವೆಲ್ಲ ವಿಚಿತ್ರವಾಗಿ ಅವನಲ್ಲಿ ಮೂಡಿ ಮೌನವಾದವು. ಐ ಲವ್ ಯೂ ಎಂದು ವಾರಿಜಾಳಿಗೆ ಹೇಳುವ ಮೊದಲು ಆಕೆಗೆ ತನ್ನಂತರಂಗದಿಂಚಿಂಚನ್ನೂ ಹೇಗೆ ತೆರೆದುಕೊಳ್ಳಬೇಕೆಂದು ಗೊತ್ತಾಗದೆ ಮರುದಿನ ಐ ಲೈಕ್ ಯು ಎಂದಿದ್ದ.

ಅದಕ್ಕೆ ವಾರಿಜಾ ನಕ್ಕು ನಕ್ಕು ಬಿನ್ನಾಣದಿಂದ ನಲಿದಾಡಿದ ಪರಿಗೆ ಇವನೊಳಗಿದ್ದ ಕೀಳರಿಮೆ, ಹೆದರಿಕೆ ಹಾಗೂ ಸಿಟ್ಟುಗಳೆಲ್ಲ ಒಂದು 'ಪ್ರೇಮ ಪ್ರೀತಿಗಳಂತಹ ಅತ್ಯಂತ ಮಾನವೀಯ ಕ್ಷಣಗಳು ಕೂಡ ಈ ದೇಶದಲ್ಲಿ ಅವಮಾನಕ್ಕೆ ಒಳಗಾಗೋದು ಎಂತಹ ದುರಂತ ಅಲ್ಲವಾ' ಎಂದಿದ್ದ. 'ಅದಕ್ಕಿಂತ